ಪಾಲಿಸುತ್ತಿದ್ದ ಶೇಷಪ್ಪನೇ ಚಿಂತಾಲು ತಂದು ತೂಕ ಮಾಡಿ ಊರವರ ಗಮನ ಸೆಳೆದು ಹೊಸತನಕ್ಕೆ ನಾಂದಿ ಹಾಡಿದ.

ತೂಕ ಮಾಡುವ ಮುನ್ನ ಅಥವಾ ಮಾಡಿದ ಮೇಲೆ ಹಸ, ಬೆಟ್ಟೆ, ಉಂಡೆ, ಗೊರಬಲು, ಮಾಣಿ ಬೇರೆಬೇರೆ ಮಾಡಿ ಆರಿಸಬೇಕು. ಈ ಎಲ್ಲಾ ಹಂತಗಳಲ್ಲೂ ಎದ್ದು ಕಾಣುತ್ತಿದ್ದದ್ದು ಶೇಷಪ್ಪನ ಕುಶಲತೆ. ಛಾಪು! ಸಸಿಹಕ್ಲಿನ ವಿಶೇಷವೆಂದರೆ ಬೆಟ್ಟೆ, ಗೊರಬಲು, ಉಂಡೆ, ಮಾಣಿ, ಗೋಟಿಗಿಂತ ಹಸವೇ ಹೆಚ್ಚು. ಶಿವಮೊಗ್ಗ ಮಾರ್ಕೆಟಲ್ಲಿ, ಶೇಷಪ್ಪನ ಅಡಿಕೆ ಯೆಂದರೆ ಪವನ್. ಖ್ಯಾತಿ ಪರಿಣಾಮವಾಗಿ ದಶಕಗಳ ಕಾಲ ಕೃಷಿ ಕಾರರಿಗೆ, ಹೊಸದಾಗಿ ತೋಟಮಾಡುವವರಿಗೆ ಶೇಷಪ್ಪನೇ ಮಾರ್ಗದರ್ಶಿ, ಸಸಿಹಕ್ಲು ಕೃಷಿಕಾಶಿ.

ಕೃಷಿ ಮಾತ್ರವಲ್ಲ; ವ್ರತಾಚರಣೆ, ಊಟೋಪಚಾರದಲ್ಲೂ ಶೇಷಪ್ಪ ಹೆಸರಾದವ. ಗೌರಿ ಗಣೇಶ, ಎಳೆಯಷ್ಟಮಿ,ಅನಂತನವ್ರತ, ನವರಾತ್ರೆ ಹೀಗೆ...ಇಷ್ಟೂ ಸಾಲದೆಂಬಂತೆ ನವಗ್ರಹ ಹೋಮ, ಚಂಡಿಕಾಯಾಗ, ದೀಪಾರಾಧನೆ ಅಂತ ನೆಂಟರಿಷ್ಟರಿಗೆ, ನಮ್ಮೂರಿನವರಿಗೆ ಪ್ರತಿ ತಿಂಗಳೂ, ಅವನ ಮನೆಯಲ್ಲಿ ಒಂದಲ್ಲ, ಒಂದು ಸುಗ್ರಾಸ ಭೋಜನ ತಪ್ಪಿದ್ದಿಲ್ಲ. ಆ ಭೋಜನಗಳಲ್ಲೂ ಗಮ್ಮಟಿಕಾಯಿ ಚಟ್ನಿ, ಮಡಹಾಗಲ ಪಲ್ಯ, ತೊಂಡೆ, ಹಸಿಗೇರುಬೀಜದ ಪಲ್ಯ, ಕೆಸಿನಚೇಪುಅಮಟೆ ಕಾಯಿರಸ, ಗದ್ದ ಮಾವುಕುಡಿ ಚಟ್ನಿ, ಕಳಲೆ ಗದ್ದೆಸೌತೆ ಹುಳಿ, ಮರಗೆಸದ ಪತ್ರೊಡೆ, ಹಾಲಗೆಸದ ಚಗಟೆ, ದಿಂಡಿನಕಾಯಿಗೊಜ್ಜು, ದಾರಪ್ಪನೊಡಲ ಪರಿಮಳ ಮಾವಿನಮಿಡಿ ಉಪ್ಪಿನಕಾಯಿ. ಇಂತಿಂಥ ಹಬ್ಬಕ್ಕೆ ಇಂತಿಂಥದ್ದೇ ಸಿಹಿಕಾರ ಎಂಬ ನಿರಖು ಬೇರೇ! ಪ್ರತಿನವರಾತ್ರಿಗೂ ಒಂದೊಂದು ಬಗೆ ಸಿಹಿ, ಖಾರ, ಪಾಯಸ. ಮಧ್ಯಾಹ್ನ ಹನ್ನೆರಡೂ ವರೆಯಿಂದ ಒಂದರೊಳಗೆ ಆರಾಧಾನ ಪಂಕ್ತಿಗೆ ಹಸ್ತೋದಕ ಹಾಕಿ, ರೂಪಾಯಿ ಪಾವಲಿ ದಕ್ಷಿಣೆ ಕೊಟ್ಟು ಊಟ ಆರಂಭವಾಗಲೇಬೇಕು. ನಡುನಡುವೆ ಶೇಷಪ್ಪ ಪಂಕ್ತಿ ಮೇಲೆ ಬಂದು, 'ಹೊತ್ತಾಯ್ತು..., ಅಡುಗೆ ಏನಾಗಿದೆಯೋ, ಏನೋ. ಮೆಲೋಗರ ರುಚಿಯಿದೆಯೋ? ಇಲ್ವೋ! ಸಾವಕಾಶ ವಾಗಲಿ...' ಎಂದು ಉಪಚಾರ ಹೇಳಬೇಕು. ಮಡಿಯುಟ್ಟು ಮೂಲೆಯಲ್ಲಿ ನಿಂತ ಕುಮಾರಕಂಠೀರವನ ಕೈಸನ್ನೆಮಾಡಿ 'ಮಾಣಿ, ನೀರು ಕೇಳೋ...' ತವಕದಲ್ಲಿ ಆಜ್ಞೆ ನಿರೀಕ್ಷಿಸುತ್ತ ಮೂಲೆಯಲ್ಲಿ ನಿಂತಿದ್ದ ಅಮ್ಮು (ಅಮರೇಂದ್ರ). ಫಳಫಳ ಹೊಳೆಯುವ ತಾಮ್ರದ ತಂಬಿಗೆಯಲ್ಲಿ, ಹಿತ್ತಾಳೆ ಕಡಾಯದಿಂದ ನೀರು ತುಂಬಿಸಿಕೊಂಡು ಪಂಕ್ತಿ ಎರಡೂ ಬದಿಯಲ್ಲಿ ಕುಳಿತವರಿಗೆ 'ಯಾರಿಗೆ ಸೀತಾಳ ಪಾತಾಳ ಪಚ್ಚೆಪನ್ನೀರ ಗಂಗಾಮೃತಾ...' ಕೇಳುವ ಶೈಲಿಯ ಉಪಚಾರವೇ ಬೇರೆ! ಊಟ ಮಾಡುವವರು, ಬಗೆಬಗೆ ಭಕ್ಷ್ಯ ಭೋಜ್ಯ ಗಡದ್ದಾಗಿ ಹೊಡೆಯುತ್ತಾ ಕೀರ್ತನೆಯ ನಾಲ್ಕು ಸಾಲು ಹೇಳಿ. 'ಭೋಜನಕಾಲೇ, ಹರನಮಃ ಪಾರ್ವತಿಪತೆಯೇ...' ಏರುದನಿ ಸೊಲ್ಲೆತ್ತುತ್ತಿದ್ದಂತೆ ಉಳಿದವರು ತೇಗಿನ ನಡುವೆ ಗಂಟಲು ಹರಿಯುವಂತೆ, ಕೋರಸ್ ಅರಚಬೇಕು...'ಹರಹರ ಮಹದೇವ...'

ವರ್ಷಾವಧಿ ಶೇಷಪ್ಪನ ಮನೆಯ ದೇವತಾ, ಜನಿವಾರ ಎಡಬಲಗಳೆಲ್ಲಾ ನಡೆಯುತ್ತಿದ್ದದ್ದು ಗೋಪಾಲಭಟ್ಟರ ಅಧ್ವರ್ಯದಲ್ಲೇ. ಈ ಗೋಪಾಲಭಟ್ಟ ಯಾರು? ಎಲ್ಲಿಂದ ವಕ್ಕರಿಸಿದರು? ಶೇಷಪ್ಪ, ಇವರು ಗಳಸ್ಯಕಂಠಸ್ಯ ಆದದ್ದು ಹೇಗೆ? ಹಲವಾರು ದಶಕಗಳಿಂದಲೂ ನಮ್ಮೂರ ಸಮಸ್ತರ ತಲೆತಿನ್ನುತ್ತಿರುವ ಶೇಷಪ್ರಶ್ನೆ. ಒಂದಂತೂ ನಿಜ, ಪರದೇಸಿಯಾಗಿ ಅಲೆಯುತ್ತಿದ್ದ ಭಟ್ಟರಿಗೂ, ಶೇಷಪ್ಪನಿಗೂ ಬಿಡಿಸಲಾಗದ ನಂಟು ಅಂಟಿಸಿದ ಹಿರಿಮೆ ಸಲ್ಲತಕ್ಕದ್ದು (ಕಳ್ಳ)ಭಟ್ಟಿಮಹಾರಾಜನಿಗೆ!

ಪ್ರತಿ ಸಂಜೆ ಹಾಲು ನೇವೇದ್ಯ ಆದ್ಮೇಲೆ, ದೇವರ ಸಾನಿಧ್ಯದಲ್ಲೇ ತೀರ್ಥೋದ್ಭವ. ಹೆಗಲಮೇಲಿನ ಶಲ್ಯ ಅಡ್ಡಹಿಡಿದು ಮರೆಮಾಡಿ, (ದೇವಾನುದೇವತೆಗಳೂ, ಸೋಮರಸ ಸೇವಿಸುತ್ತಿದ್ದರಲ್ಲವೇ? ಎಂದು ಸಮರ್ಥಿಸಿಕೊಳ್ಳುತ್ತಾ) ಭಕ್ತಶ್ರೇಷ್ಠರಿಬ್ಬರೂ ತೀರ್ಥಸೇವಿಸುತ್ತಿದ್ದದ್ದೂ ಭಗವಂತನನಾಮ ಸ್ಮರಣೆಯೊಂದಿಗೆ.. 'ನಾರಾಯಣ.. ನಾರಾಯಣ... ಹರಿಕೃಷ್ಣ... ವಾಸುದೇವ..'

ಆ ಪರಮಪವಿತ್ರ ತೀರ್ಥೋದ್ಭವ ಮಾತ್ರವಲ್ಲ; ರಾಮರಸದ ನಂಟೂ ಅವರ ಜೋಡಿ ಗಟ್ಟಿ ಬೆಸುಗೆಯ ಅಂಟು! ಅಂಗೈ ನಡುವೆ ಗಾಂಜಾ ಸೊಪ್ಪು ಗಸಗಸ ತಿಕ್ಕಿ. ಪುಡಿ ಮಾಡಿ, ಹದಗೊಳಿಸಿ ಹಲಸಿನೆಲೆಕೊಟ್ಟೆಗೆ ತುಂಬಿ 'ದಂ'ಎಳೆಯುವುದರಲ್ಲಿ ಮಾತ್ರವಲ್ಲ; ಭಂಗಿಯ ಪಾನಕ, ಲೇಹ, ಮಣಿಯಪ್ಪಚ್ಚೆ ವಿಶೇಷ ಖಾದ್ಯ